ಮುಗಿದಮೇಲೆ 28ಸಾವಿರ ಅರ್ಜಿಗಳನ್ನು ರಿಸೀವ್ ಮಾಡಿರುತ್ತೇವೆಂದು ಹೇಳುತ್ತಿದ್ದಾರೆ. ಅದರಂತೆ ಬಾಕಿ ಅರ್ಜಿಗಳಿಗೂ ಕಾಲಾವಕಾಶ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟು ಈ ಕಲ್ಯಾಣ ಕಾರ್ಯಕ್ರಮದಲ್ಲಿ ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

SRI M. RAJASHEKARA MURTHY : I have already replied that time cannot be extended.

ಮಳೆಯ ಅಭಾವದಿಂದ ನೊಂದವರಿಗೆ ಪರಿಹಾರ

119 - ಶ್ರೀ ಗೋಪಾಲ ಎಂ. ಕಾನಡೆ (ಸಿರ್ಸಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿರ್ಸಿ-ಸಿದ್ದಾಪುರ ತಾಲ್ಲೂಕಿನಲ್ಲಿ ಮಳೆಯ ಹಾನಿಯಿಂದ ಉಂಟಾದ ನಷ್ಟವೆಷ್ಟು? (ನಷ್ಟದ ವಿವರ ನೀಡುವುದು)

ಆ) ಹಾಗಿದ್ದಲ್ಲಿ ಎಷ್ಟು ರೈತರಿಗೆ ಪರಿಹಾರ ನೀಡಲಾಗಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಮಳೆಯ ಹಾನಿಯಿಂದ ನಷ್ಟದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ :

ತಾಲ್ಲೂಕಿನ ಹೆಸರು	ಖಾಸಗಿ ಆಸ್ತಿಗೆ ಹಾನಿ					
	ಜಾನುವಾರು ಹಾನಿ		ಮನೆಗಳ ಹಾನಿ		ಬೆಳೆ ನಷ್ಟ	
	ಸಂಖ್ಯೆ	ನಷ್ಟ (ರೂ. ಗಳಲ್ಲಿ)	ಸಂಖ್ಯೆ (ಬಾಗಶಃ)	ಹಾನಿ (ರೂ. ಗಳಲ್ಲಿ)	ಹೆಕ್ಟೇರ್	ನಷ್ಟ (ರೂ. ಗಳಲ್ಲಿ)
1. ಶಿರ್ಸಿ	1(ದನ)	3000	47	1.00,000	1645	874000
2. ಸಿದ್ದಾಪುರ	-	-	11	25,000	2580	769000

ತಾಲ್ಲೂಕಿನ ಹೆಸರು	ಖಾಸಗಿ ಆಸ್ತಿಗೆ ಹಾನಿ					
	ರಸ್ತೆ		ಸೇತುವೆ		ಸಣ್ಣ ನೀರಾವರಿ ಕೆರೆ	
	ಸಂಖ್ಯೆ	ನಷ್ಟ (ರೂ. ಗಳಲ್ಲಿ)	ಸಂಖ್ಯೆ	ನಷ್ಟ (ರೂ. ಗಳಲ್ಲಿ)	ಸಂಖ್ಯೆ	ನಷ್ಟ (ರೂ. ಗಳಲ್ಲಿ)
1. ಶಿರ್ಸಿ	25	30,35,000	2	2,75,000	8	595000
2. ಸಿದ್ದಾಪುರ	23	5,60,000	1,1,00,000			
ಒಟ್ಟು ಹಾನಿ ಖಾಸಗಿ ಆಸ್ತಿಗೆ ರೂ.				17,71,000.0		
ಸಾರ್ವಜನಿಕ ಆಸ್ತಿಗೆ ರೂ.				45,65,000.00		
ಒಟ್ಟು ರೂ.				63,36.000.00		

ಆ) ಶಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಅನುಕ್ರಮವಾಗಿ 1,656 ಮತ್ತು 1,772 ರೈತರಿಗೆ ಪರಿಹಾರ ನೀಡಲಾಗಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ : ಈ ಪರಿಹಾರ ಕೊಡುವ ಟೈಮ್‌ನಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ಕೆಲವು ರೈತರಿಗೆ ಸರಿಯಾದ ಪರಿಹಾರ ಸಿಕ್ಕಿಲ್ಲ, ಪುನಃ ಯಾರಾದರೂ ಅರ್ಜಿ ತೆಗೆದುಕೊಂಡು ಬಂದರೆ ಅವರಿಗೆ ಸಹಾಯ ಮಾಡುತ್ತೀರಾ? ಶಿರಸಿ, ಮತ್ತು ಸಿದ್ದಾಪುರ ತಾಲ್ಲೂಕಿನಲ್ಲಿ ಮಳೆ ಹಾನಿಯಿಂದ ಪರಿಹಾರ ಕೊಡುವಾಗ ಸ್ವಲ್ಪ ವ್ಯತ್ಯಾಸ ಆಗಿದೆ. ಕೆಲವು ಮಂದಿ ಹೆಸರು ತಪ್ಪಿದೆ. ಅವರು ಅರ್ಜಿ ಕೊಡುತ್ತಿದ್ದಾರೆ, ತಾವು ಏನಾದರೂ ಸಹಾಯ ಮಾಡುತ್ತೀರಾ?

ಶ್ರೀ ಎಂ. ರಾಜಶೇಖರ ಮೂರ್ತಿ : ಯಾರು ಯಾರಿಗೆ ತೊಂದರೆಯಾಗಿದೆ ಪರಿಹಾರ ಸಿಕ್ಕಿಲ್ಲ ಅವರು ಏನಾದರೂ ಸಿಕ್ಕಿಲ್ಲ ಎಂದು ಅಪ್ಲಿಕೇಷನ್ ಕೊಟ್ಟರೆ ಅದನ್ನು ಕನ್ಸಿಡರ್ ಮಾಡುತ್ತೇವೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಈ ವಿಚಾರದಲ್ಲಿ ಧಾರವಾಡ ಜಿಲ್ಲೆಗೆ ಹಣ ಕೊಟ್ಟಿಲ್ಲ, ಡಿ.ಸಿ. ಅವರು ಗ್ರಾಂಟ್ಸ್ ಇಲ್ಲ ಎಂದು ಹೇಳುತಿದ್ದಾರೆ. ಬೆಳೆ ಹಾನಿ ಏನಾಯಿತು ಅದರಲ್ಲಿ ಧಾರವಾಡ ಜಿಲ್ಲೆಗೆ ಒಂದು ಪೈಸೆ ಕೊಟ್ಟಿಲ್ಲ. ಡಿ.ಸಿ.ಯವರನ್ನು ಕೇಳಿದರೆ ದುಡ್ಡಿಲ್ಲ ಎಂದು ಹೇಳುತ್ತಾರೆ, ತಾವು ದಯವಿಟ್ಟು ಇದರ ಬಗ್ಗೆ ಸದನಕ್ಕೆ ತಿಳಿಸಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ : ಡಿ ಸಿ ಯವರು ದುಡ್ಡು ಬೇಕೆಂದು ನಮಗೆ ಹೇಳಿದರೆ ಅವರಿಗೆ ದುಡ್ಡು ಕೊಡುತ್ತೇವೆ.

ಶಿರಾ ತಾಲ್ಲೂಕು ಬ್ರಹ್ಮಸಂದ್ರ ಗೇಟು ಬಳಿ ಉಪಕೃಷಿ ಮಾರುಕಟ್ಟೆಯ ಸ್ಥಾಪನೆ

596 - ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿರಾ ತಾಲ್ಲೂಕು, ಬ್ರಹ್ಮಸಂದ್ರ ಗೇಟಿನ ಬಳಿ ಉಪ-ವ್ಯವಸಾಯೋತ್ಪನ್ನ ಮಾರುಕಟ್ಟೆಯ ಅವಶ್ಯಕತೆಯಿದ್ದು ಅದನ್ನು ಸ್ಥಾಪಿಸಲು ಸಾರ್ವಜನಿಕರಿಂದ ಮತ್ತು ಶಾಸಕರಿಂದ ಮನವಿಗಳು ಬಂದಿರುವುದು ಸರ್ಕಾರಕ್ಕೆ ತಿಳಿದಿದೆಯೆ;

ಆ) ಹಾಗಿದ್ದಲ್ಲಿ ಮಾರುಕಟ್ಟೆಯನ್ನು ಸ್ಥಾಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಹೌದು

ಆ) ಇದರ ಸಾಧ್ಯ ಸಾಧ್ಯತೆಯನ್ನು ಪರಿಶೀಲಿಸಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದೀರಿ. ಇನ್ನೊಂದಕ್ಕೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಅರ್ಜಿ ಬಂದಿರುವುದು ಯಾವಾಗ ಸರಕಾರಕ್ಕೆ ಶಾಸಕರಿಂದ ಅಥವಾ ಸಾರ್ವಜನಿಕರಿಂದ ಬಂದಾಗ ಅದನ್ನು ಪರಿಶೀಲನೆ ಮಾಡಿ ಅಂತಿಮ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಎಷ್ಟುದಿನ ಬೇಕೆಂದು ಸಚಿವರು ತಿಳಿಸಬೇಕು.